AGR - 662 GR - 1100

(1)

ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್ ಜನರಲ್
ಆಫ್ ಪೊಲೀಸ್‌ರವರ ಕಾರ್ಯಾಲಯ
ಕರ್ನಾಟಕ ರಾಜ್ಯ, ನೃಪತುಂಗ ರಸ್ತೆ
ಬೆಂಗಳೂರು - ೫೬೦ ೦೦೧.

ಇ–ಮೇಲ್ ಫ್ಯಾಕ್ಸ್
ಕರ್ನಾಟಕ ಸರ್ಕಾರ
ಪೊಲೀಸ್ ಇಲಾಖೆ

ಸಂಖ್ಯೆ: ಹೆಚ್‌ಆರ್‌ಎಂ(1)7/97/2023–24

ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್
ಜನರಲ್ ಆಫ್ ಪೊಲೀಸ್‌ರವರ ಕಚೇರಿ,
ಕರ್ನಾಟಕ ರಾಜ್ಯ, ಬೆಂಗಳೂರು.
ದಿನಾಂಕ: -01–2024

## ಸು ತ್ತೋ ಲೆ

ವಿಷಯ: 2023ನೇ ಸಾಲಿನ ಮಾನ್ಯ ಮುಖ್ಯಮಂತ್ರಿಗಳ ಪದಕಕ್ಕೆ ಪೊಲೀಸ್ ಅಧಿಕಾರಿ/ಸಿಬ್ಬಂದಿಗಳ ಶಿಫಾರಸ್ಸುಗಳನ್ನು ಸಲ್ಲಿಸುವ ಕುರಿತು

ಉಲ್ಲೇಖ: ಮುಖ್ಯಮಂತ್ರಿಗಳ ಪದಕಗಳ ನಿಯಮಗಳು 1982

****

1. 2023 ನೇ ಸಾಲಿನ ಮಾನ್ಯ ಮುಖ್ಯಮಂತ್ರಿಗಳ ಪದಕಕ್ಕೆ ತಮ್ಮ ಘಟಕದ ಅರ್ಹ ಪೊಲೀಸ್ ಅಧಿಕಾರಿ/ಸಿಬ್ಬಂದಿಯವರ ಶಿಫಾರಸ್ಸುಗಳನ್ನು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ದ್ವಿಪ್ರತಿಯಲ್ಲಿ ಇದರೊಂದಿಗೆ ಲಗತ್ತಿಸಿರುವ ನಿಗದಿತ ನಮೂನೆಯಲ್ಲಿ Soft copy & Hard Copy ಸಿಡಿ/ ಪೆನ್‌ಡ್ರೈವ್‌ನಲ್ಲಿ ದಿನಾಂಕ:30–01–2024ರ ಒಳಗಾಗಿ ಈ ಕಛೇರಿಗೆ ತಲುಪುವಂತೆ ತಪ್ಪದೇ ಕಳುಹಿಸಿಕೊಡಲು ಕೋರಲಾಗಿದೆ.

2. ಈ ಸುತ್ತೋಲೆಯೊಂದಿಗೆ ಲಗತ್ತಿಸಲಾದ ನಮೂನೆಗಳಲ್ಲಿಯೇ ಶಿಫಾರಸ್ಸುಗಳನ್ನು ಕಳುಹಿಸಿಕೊಡುವುದು, ಹಿಂದಿನ ಅವಧಿಯಲ್ಲಿನ ಹಳೆಯ ನಮೂನೆಗಳನ್ನು ಉಪಯೋಗಿಸಬಾರದು.

3. *ಈ ಸುತ್ತೋಲೆಯನ್ನು ಎಲ್ಲಾ ಉಪ–ವಿಭಾಗಗಳು ಮತ್ತು ಠಾಣೆಗಳಿಗೆ ಕಳುಹಿಸಿ, ಎಲ್ಲಾ ಅಧೀನಾಧಿಕಾರಿಗಳು ಮತ್ತು ಅಧೀನ ಸಿಬ್ಬಂದಿಗಳ ಗಮನಕ್ಕೆ ತರಲು ಪ್ರಚುರ ಪಡಿಸುವುದು.*

4. ಘಟಕಾಧಿಕಾರಿಗಳು ಶಿಫಾರಸ್ಸುಗಳನ್ನು ಕಳುಹಿಸುವ ಮೊದಲು ಅಗತ್ಯ ತಪಾಸಣೆ ನಡೆಸಿ, ಎಲ್ಲಾ ಅರ್ಹತೆ ಹಾಗೂ ನಿಬಂಧನೆಗಳನ್ನು ಪೂರೈಸುವ ಅರ್ಹ ಅಧಿಕಾರಿ/ಸಿಬ್ಬಂದಿಗಳ ಶಿಫಾರಸ್ಸುಗಳನ್ನು ಮಾತ್ರ ಕಳುಹಿಸಬೇಕೆ ಹೊರತು ಸ್ವೀಕರಿಸಿದ ಎಲ್ಲಾ ಮನವಿಗಳನ್ನು ಕಳುಹಿಸತಕ್ಕದ್ದಲ್ಲ.

5. ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳ ಪದಕ ಪಡೆದ ಅಧಿಕಾರಿ / ಸಿಬ್ಬಂದಿಗಳ ಹೆಸರನ್ನು ಮತ್ತೊಮ್ಮೆ ಇದೇ ಪದಕಕ್ಕೆ ಶಿಫಾರಸ್ಸು ಮಾಡಬಾರದೆಂದು ತಿಳಿಸಲಾಗಿದೆ.

6. ಪದಕಕ್ಕೆ ಶಿಫಾರಸ್ಸು ಮಾಡುತ್ತಿರುವ ಯಾವುದೇ ಅಧಿಕಾರಿ / ಸಿಬ್ಬಂದಿಯವರ ವಿರುದ್ಧ ಯಾವುದೇ ಇಲಾಖಾ ವಿಚಾರಣೆ / ಚಾಲ್ತಿ ಶಿಕ್ಷೆ ಬಾಕಿ ಇದ್ದಲ್ಲಿ ಅಥವಾ ಕೈಗೊಳ್ಳಲು ಉದ್ದೇಶಿಸಿದ್ದಲ್ಲಿ ಹಾಗೂ ಅಮಾನತ್ತಿನ ಮೇಲೆ ಇದ್ದಲ್ಲಿ ಅಂತಹ ಅಧಿಕಾರಿ/ಸಿಬ್ಬಂದಿಗಳ ಶಿಫಾರಸ್ಸುಗಳನ್ನು ಕಳುಹಿಸಬಾರದೆಂದು ಸೂಚಿಸಿದೆ ಹಾಗೂ ಮುಂದೆ ಆದೇಶಿಸಬಹುದಾದ ವಿಚಾರಣೆಗಳಿದ್ದರೆ/ಯಾವುದಾದರೂ ನ್ಯಾಯಾಂಗ ವಿಚಾರಣೆ /ಕ್ರಿಮಿನಲ್ ಮೊಕದ್ದಮೆ / ಲೋಕಾಯುಕ್ತ/ಎಸಿಬಿ ಪ್ರಕರಣ ಇತ್ಯಾದಿ ಕುರಿತು ತಪ್ಪದೆ ಪರಿಶೀಲಿಸಿದ ನಂತರವೇ ಶಿಫಾರಸ್ಸುಗಳನ್ನು ಸಲ್ಲಿಸುವುದು.

7. ಗುಣಕಥನವು ಈ ಕೆಳಕಂಡ ಮಾನದಂಡಗಳನ್ನು ಮಾತ್ರ ಹೊಂದಿದ್ದು, 2 ಪುಟಗಳಿಗೆ ಮೀರದಂತೆ ಸಂಕ್ಷಿಪ್ತವಾಗಿರತಕ್ಕದ್ದು.
    1. ಅಸಾಧಾರಣ ಕಾರ್ಯ ಕುಶಲತೆ.
    2. ಸ್ಪಷ್ಟವಾಗಿ ಎದ್ದು ಕಾಣುವ ಕರ್ತವ್ಯ ನಿಷ್ಠೆ.

3. ಯಾವುದೇ ಗಂಭೀರವಾದ ಅಥವಾ ವ್ಯಾಪಕವಾಗಿ ಹಬ್ಬಿದ ಅಪರಾಧದ ಅಥವಾ ಸಾರ್ವಜನಿಕ ವ್ಯವಸ್ಥೆಯ ನಿರ್ವಹಣೆಯಲ್ಲಿ ತೋರಿದ ಅಸಾಮಾನ್ಯ ಸೇವೆ.
4. ಜಟಿಲ ಪ್ರಕರಣಗಳಲ್ಲಿ ತೋರಿದ ಅಸಾಧಾರಣಾ ತನಿಖಾ ಕೌಶಲ್ಯ.
5. ಉನ್ನತ ಮಟ್ಟದ ಬಂದೋಬಸ್ತ್ ವ್ಯವಸ್ಥೆಯ ಸಂಘಟನೆ.
6. ರಾಜ್ಯ/ರಾಷ್ಟ್ರ/ಅಂತರ್‌ರಾಷ್ಟ್ರೀಯ ಮಟ್ಟದ ಕ್ರೀಡೆಗಳಲ್ಲಿ ತೋರಿದ ಅತ್ಯುತ್ತಮವಾದ ಪ್ರತಿಭೆ.
7. ಎದ್ದು ಕಾಣುವ ಧೈರ್ಯ ಮತ್ತು ಸಾಹಸವನ್ನು ಮೆರೆದ ಇತರೆ ಯಾವುದೇ ಕಾರ್ಯ.

ಮೇಲ್ಕಂಡ ಮಾನದಂಡಗಳ ಅಂಶಗಳ ಬಗ್ಗೆ 2023 ನೇ ಸಾಲಿಗೆ ಆ ಒಂದು ವರ್ಷದ ಅವಧಿಯಲ್ಲಿ ತೋರಿದ ಅಸಾಧಾರಣ ಕಾರ್ಯ ನಿರ್ವಹಣೆ ಮಾತ್ರ ಪದಕ ಪ್ರದಾನಕ್ಕೆ ಪರಿಗಣಿಸಲಾಗುವುದು.

8. ಮಾನ್ಯ ಮುಖ್ಯಮಂತ್ರಿಗಳ ಪದಕಗಳಿಗೆ ಸೂಪರಿಂಟೆಂಡೆಂಟ್ ಆಫ್ ಪೊಲೀಸ್ (ನಾನ್-ಐಪಿಎಸ್) ಮತ್ತು ಕೆಳಹಂತದ ಅಧಿಕಾರಿ ಮತ್ತು ಸಿಬ್ಬಂದಿಯವರನ್ನು ವಲಯ/ವಿಭಾಗದ ಮಟ್ಟದಲ್ಲಿ ಆಯ್ಕೆ ಮಾಡುವ ಸಲುವಾಗಿ ಈ ಕೆಳಗಿನ ವಲಯ/ವಿಭಾಗ ಮಟ್ಟದ ಸಮಿತಿಗಳನ್ನು ರಚಿಸಲಾಗಿದೆ. ಸಮಿತಿಗಳು ತಮ್ಮ ವಿಭಾಗದಲ್ಲಿರುವ ಅರ್ಹ ಅಧಿಕಾರಿ ಮತ್ತು ಸಿಬ್ಬಂದಿಯವರ ಪಟ್ಟಿಯನ್ನು ಸಿದ್ಧಪಡಿಸಿ, ಪ್ರಧಾನ ಕಚೇರಿಗೆ ಕಳುಹಿಸತಕ್ಕದ್ದು.

| ಕ್ರ.ಸ. | ವಲಯ/ವಿಭಾಗ ಮಟ್ಟದ ಸಮಿತಿಗಳು | ಸಮಿತಿಯ ಪದಾಧಿಕಾರಿಗಳು | |
|---|---|---|---|
| 1. | ಸಿಐಡಿ, ವಿಶೇಷ ಘಟಕಗಳು ಮತ್ತು ಆರ್ಥಿಕ ಅಪರಾಧಗಳು | ಡಿಜಿಪಿ. ಸಿಐಡಿ., ವಿಶೇಷ ಘಟಕಗಳು ಮತ್ತು ಆರ್ಥಿಕ ಅಪರಾಧಗಳು ಬೆಂಗಳೂರು. | ಅಧ್ಯಕ್ಷರು |
| | | ಎಡಿಜಿಪಿ, ಸಿಐಡಿ, ಬೆಂಗಳೂರು | ಸದಸ್ಯರು |
| | | ಡಿಐಜಿಪಿ. ಸಿ.ಐ.ಡಿ. ಬೆಂಗಳೂರು. | ಸದಸ್ಯರು |
| | | ಎಸ್‌ಪಿ, ಸಿಐಡಿ ಆಡಳಿತ, ಬೆಂಗಳೂರು | ಸದಸ್ಯ ಕಾರ್ಯದರ್ಶಿ |
| 2. | ರಾಜ್ಯ ಗುಪ್ತವಾರ್ತೆ | ನಿರ್ದೇಶಕರು, ರಾಜ್ಯ ಗುಪ್ತವಾರ್ತೆ, ಬೆಂಗಳೂರು. | ಅಧ್ಯಕ್ಷರು |
| | | ಹೆಚ್ಚುವರಿ ನಿರ್ದೇಶಕರು, ರಾಜ್ಯ ಗುಪ್ತವಾರ್ತೆ, ಬೆಂಗಳೂರು | ಸದಸ್ಯರು |
| | | ಉಪ ನಿರ್ದೇಶಕರು. (ಆಡಳಿತ) ರಾಜ್ಯ ಗುಪ್ತವಾರ್ತೆ, ಬೆಂಗಳೂರು | ಸದಸ್ಯ ಕಾರ್ಯದರ್ಶಿ |
| 3. | ಆಂತರಿಕ ಭದ್ರತಾ ವಿಭಾಗ, ಬೆಂಗಳೂರು | ಡಿಜಿಪಿ ಆಂತರಿಕ ಭದ್ರತಾ ವಿಭಾಗ, ಬೆಂಗಳೂರು | ಅಧ್ಯಕ್ಷರು |
| | | ಎಡಿಜಿಪಿ ಆಂತರಿಕ ಭದ್ರತಾ ವಿಭಾಗ, ಬೆಂಗಳೂರು | ಸದಸ್ಯರು |
| | | ಐಜಿಪಿ ಆಂತರಿಕ ಭದ್ರತಾ ವಿಭಾಗ, ಬೆಂಗಳೂರು | ಸದಸ್ಯ ಕಾರ್ಯದರ್ಶಿ |
| | | ಎಸ್‌ಪಿ. ಐಎಸ್‌ಡಿ, ಕೇಂದ್ರ ಸ್ಥಾನ ಬೆಂಗಳೂರು | ಸದಸ್ಯರು |
| 4. | ನೇಮಕಾತಿ ಮತ್ತು ತರಬೇತಿ ಘಟಕಗಳು | ಎಡಿಜಿಪಿ, ತರಬೇತಿ, ಬೆಂಗಳೂರು | ಅಧ್ಯಕ್ಷರು |
| | | ಡೈರೆಕ್ಟರ್, ಕೆಪಿಎ, ಮೈಸೂರು | ಸದಸ್ಯ ಕಾರ್ಯದರ್ಶಿ |
| | | ಡಿಐಜಿಪಿ, ನೇಮಕಾತಿ ಬೆಂಗಳೂರು | ಸದಸ್ಯರು |
| | | ಎಸ್.ಪಿ. ಮತ್ತು ಪ್ರಿನ್ಸಿಪಾಲ್, ಪಿಟಿಸಿ, ಕಲಬುರಗಿ | ಸದಸ್ಯರು |

| ಕ್ರ.ಸ. | ವಲಯ/ವಿಭಾಗ ಮಟ್ಟದ ಸಮಿತಿಗಳು | ಸಮಿತಿಯ ಪದಾಧಿಕಾರಿಗಳು | |
|---|---|---|---|
| 5. | ಸಂಪರ್ಕ, ಸಾರಿಗೆ ಮತ್ತು ಆಧುನೀಕರಣ | ಎಡಿಜಿಪಿ. ಸಿ.ಎಲ್.&ಎಂ. ಬೆಂಗಳೂರು | ಅಧ್ಯಕ್ಷರು |
| | | ಎಸ್‌ಪಿ, ನಿಸ್ತಂತು, ಬೆಂಗಳೂರು | ಸದಸ್ಯ ಕಾರ್ಯದರ್ಶಿ |
| | | ಎಸ್‌ಪಿ, ಎಂ.ಟಿ.ಓ. ಬೆಂಗಳೂರು | ಸದಸ್ಯರು |
| 6. | ಅಪರಾಧ ಮತ್ತು ತಾಂತ್ರಿಕ ಸೇವೆಗಳು ಹಾಗೂ ಪೊಲೀಸ್ ಗಣಕ ವಿಭಾಗ | ಎಡಿಜಿಪಿ. ಪಿಸಿಡಬ್ಲ್ಯೂ, ಬೆಂಗಳೂರು | ಅಧ್ಯಕ್ಷರು |
| | | ಎಡಿಜಿಪಿ. ಅಪರಾಧ ಮತ್ತು ತಾಂತ್ರಿಕ ಸೇವೆಗಳು, ಬೆಂಗಳೂರು | ಸದಸ್ಯರು |
| | | ಎಸ್‌ಪಿ. ಎಸ್‌ಸಿಆರ್‌ಬಿ, ಬೆಂಗಳೂರು | ಸದಸ್ಯ ಕಾರ್ಯದರ್ಶಿ |
| 7. | ರೈಲ್ವೇ ಘಟಕ | ಡಿಐಜಿಪಿ ರೈಲ್ವೇಸ್, ಬೆಂಗಳೂರು | ಅಧ್ಯಕ್ಷರು |
| | | ಎಸ್.ಪಿ. ರೈಲ್ವೇಸ್, ಬೆಂಗಳೂರು | ಸದಸ್ಯ ಕಾರ್ಯದರ್ಶಿ |
| | | ಹಿರಿಯ ಡಿವೈಎಸ್‌ಪಿ, ರೈಲ್ವೆ | ಸದಸ್ಯರು |
| 8. | ಬೆಂಗಳೂರು ನಗರ | ಪೊಲೀಸ್ ಆಯುಕ್ತರು, ಬೆಂಗಳೂರು ನಗರ. | ಅಧ್ಯಕ್ಷರು |
| | | ಹೆಚ್ಚುವರಿ ಪೊಲೀಸ್ ಆಯುಕ್ತರು, ಆಡಳಿತ, ಬೆಂಗಳೂರು ನಗರ. | ಸದಸ್ಯರು |
| | | ಹೆಚ್ಚುವರಿ ಪೊಲೀಸ್ ಆಯುಕ್ತರು, ಪೂರ್ವ, ಬೆಂಗಳೂರು ನಗರ | ಸದಸ್ಯರು |
| | | ಹೆಚ್ಚುವರಿ ಪೊಲೀಸ್ ಆಯುಕ್ತರು, ಪಶ್ಚಿಮ, ಬೆಂಗಳೂರು ನಗರ | ಸದಸ್ಯರು |
| | | ಡಿಸಿಪಿ(ಆಡಳಿತ) ಬೆಂಗಳೂರು ನಗರ | ಸದಸ್ಯ ಕಾರ್ಯದರ್ಶಿ |
| 9. | ಕರ್ನಾಟಕ ರಾಜ್ಯ ಮೀಸಲು ಪೊಲೀಸ್ ಪಡೆ | ಎಡಿಜಿಪಿ. ಕೆಎಸ್‌ಆರ್‌ಪಿ. ಬೆಂಗಳೂರು | ಅಧ್ಯಕ್ಷರು |
| | | ಐಜಿಪಿ. ಕೆ.ಎಸ್.ಆರ್.ಪಿ. ಬೆಂಗಳೂರು | ಸದಸ್ಯರು |
| | | ಡಿಐಜಿಪಿ. ಕೆ.ಎಸ್.ಆರ್.ಪಿ. ಬೆಂಗಳೂರು | ಸದಸ್ಯ ಕಾರ್ಯದರ್ಶಿ |
| | | ಕಮಾಂಡೆಂಟ್, 1ನೇ ಪಡೆ, ಕೆಎಸ್‌ಆರ್‌ಪಿ, ಬೆಂಗಳೂರು | ಸದಸ್ಯರು |
| 10. | ಕೇಂದ್ರ ವಲಯ, ಬೆಂಗಳೂರು | ಐಜಿಪಿ. ಕೇಂದ್ರ ವಲಯ, ಬೆಂಗಳೂರು | ಅಧ್ಯಕ್ಷರು |
| | | ಎಸ್‌ಪಿ. ಬೆಂಗಳೂರು ಜಿಲ್ಲೆ | ಸದಸ್ಯ ಕಾರ್ಯದರ್ಶಿ |
| | | ಎಸ್‌ಪಿ. ತುಮಕೂರು ಜಿಲ್ಲೆ | ಸದಸ್ಯರು |
| | | ಎಸ್‌ಪಿ. ಕೋಲಾರ ಜಿಲ್ಲೆ | ಸದಸ್ಯರು |
| | | ಎಸ್‌ಪಿ. ಕೆ.ಜಿ.ಎಫ್. | ಸದಸ್ಯರು |
| | | ಎಸ್‌ಪಿ. ಚಿಕ್ಕಬಳ್ಳಾಪುರ | ಸದಸ್ಯರು |
| | | ಎಸ್‌ಪಿ. ರಾಮನಗರ | ಸದಸ್ಯರು |
| 11. | ದಕ್ಷಿಣ ವಲಯ, ಮೈಸೂರು ಮತ್ತು ಪೊಲೀಸ್ ಆಯುಕ್ತರು, ಮೈಸೂರು ನಗರ | ಡಿಐಜಿಪಿ, ದಕ್ಷಿಣ ವಲಯ, ಮೈಸೂರು | ಅಧ್ಯಕ್ಷರು |
| | | ಪೊಲೀಸ್ ಆಯುಕ್ತರು, ಮೈಸೂರು ನಗರ | ಸದಸ್ಯರು |
| | | ಎಸ್‌ಪಿ. ಮೈಸೂರು ಜಿಲ್ಲೆ | ಸದಸ್ಯ ಕಾರ್ಯದರ್ಶಿ |
| | | ಎಸ್‌ಪಿ. ಚಾಮರಾಜನಗರ ಜಿಲ್ಲೆ | ಸದಸ್ಯರು |
| | | ಎಸ್‌ಪಿ. ಮಂಡ್ಯ ಜಿಲ್ಲೆ | ಸದಸ್ಯರು |
| | | ಎಸ್‌ಪಿ. ಹಾಸನ ಜಿಲ್ಲೆ | ಸದಸ್ಯರು |
| | | ಎಸ್‌ಪಿ. ಕೊಡಗು ಜಿಲ್ಲೆ | ಸದಸ್ಯರು |

(4)

| ಕ್ರ.ಸ. | ವಲಯ/ವಿಭಾಗ ಮಟ್ಟದ ಸಮಿತಿಗಳು | ಸಮಿತಿಯ ಪದಾಧಿಕಾರಿಗಳು | |
|---|---|---|---|
| 12. | ಪೂರ್ವ ವಲಯ, ದಾವಣಗೆರೆ | ಐಜಿಪಿ, ಪೂರ್ವ ವಲಯ, ದಾವಣಗೆರೆ | ಅಧ್ಯಕ್ಷರು |
| | | ಎಸ್‌ಪಿ. ದಾವಣಗೆರೆ ಜಿಲ್ಲೆ | ಸದಸ್ಯ ಕಾರ್ಯದರ್ಶಿ |
| | | ಎಸ್‌ಪಿ. ಚಿತ್ರದುರ್ಗ ಜಿಲ್ಲೆ | ಸದಸ್ಯರು |
| | | ಎಸ್‌ಪಿ. ಶಿವಮೊಗ್ಗ ಜಿಲ್ಲೆ | ಸದಸ್ಯರು |
| | | ಎಸ್‌ಪಿ. ಹಾವೇರಿ ಜಿಲ್ಲೆ | ಸದಸ್ಯರು |
| 13. | ಪಶ್ಚಿಮ ವಲಯ, ಮಂಗಳೂರು ಮತ್ತು ಪೊಲೀಸ್ ಆಯುಕ್ತರು, ಮಂಗಳೂರು ನಗರ | ಡಿಐಜಿಪಿ. ಪಶ್ಚಿಮ ವಲಯ, ಮಂಗಳೂರು | ಅಧ್ಯಕ್ಷರು |
| | | ಪೊಲೀಸ್ ಆಯುಕ್ತರು, ಮಂಗಳೂರು ನಗರ | ಸದಸ್ಯರು |
| | | ಎಸ್‌ಪಿ. ದಕ್ಷಿಣ ಕನ್ನಡ ಜಿಲ್ಲೆ | ಸದಸ್ಯ ಕಾರ್ಯದರ್ಶಿ |
| | | ಎಸ್‌ಪಿ. ಉಡುಪಿ ಜಿಲ್ಲೆ | ಸದಸ್ಯರು |
| | | ಎಸ್‌ಪಿ. ಚಿಕ್ಕಮಗಳೂರು ಜಿಲ್ಲೆ | ಸದಸ್ಯರು |
| | | ಎಸ್‌ಪಿ. ಉತ್ತರ ಕನ್ನಡ ಜಿಲ್ಲೆ | ಸದಸ್ಯರು |
| 14. | ಉತ್ತರ ವಲಯ, ಬೆಳಗಾವಿ, ಪೊಲೀಸ್ ಆಯುಕ್ತರು, ಹುಬ್ಬಳ್ಳಿ- ಧಾರವಾಡ, ಮತ್ತು ಪೊಲೀಸ್ ಆಯುಕ್ತರು, ಬೆಳಗಾವಿ | ಐಜಿಪಿ. ಉತ್ತರ ವಲಯ, ಬೆಳಗಾವಿ | ಅಧ್ಯಕ್ಷರು |
| | | ಪೊಲೀಸ್ ಆಯುಕ್ತರು, ಬೆಳಗಾವಿ ನಗರ | ಸದಸ್ಯರು |
| | | ಪೊಲೀಸ್ ಆಯುಕ್ತರು, ಹುಬ್ಬಳ್ಳಿ-ಧಾರವಾಡ ನಗರ | ಸದಸ್ಯರು |
| | | ಎಸ್‌ಪಿ ಬೆಳಗಾವಿ ಜಿಲ್ಲೆ | ಸದಸ್ಯ ಕಾರ್ಯದರ್ಶಿ |
| | | ಎಸ್‌ಪಿ ಬಿಜಯಪುರ ಜಿಲ್ಲೆ | ಸದಸ್ಯರು |
| | | ಎಸ್‌ಪಿ ಬಾಗಲಕೋಟೆ ಜಿಲ್ಲೆ | ಸದಸ್ಯರು |
| | | ಎಸ್‌ಪಿ.ಧಾರವಾಡ ಜಿಲ್ಲೆ | ಸದಸ್ಯರು |
| | | ಎಸ್‌ಪಿ ಗದಗ್ ಜಿಲ್ಲೆ | ಸದಸ್ಯರು |
| 15. | ಈಶಾನ್ಯ ವಲಯ, ಕಲಬುರಗಿ ಮತ್ತು ಪೊಲೀಸ್ ಆಯುಕ್ತರು ಕಲಬುರಗಿ ನಗರ | ಡಿಐಜಿಪಿ, ಈಶಾನ್ಯ ವಲಯ, ಕಲಬುರಗಿ | ಅಧ್ಯಕ್ಷರು |
| | | ಪೊಲೀಸ್ ಆಯುಕ್ತರು, ಕಲಬುರಗಿ ನಗರ | ಸದಸ್ಯರು |
| | | ಎಸ್‌ಪಿ, ಕಲಬುರಗಿ ಜಿಲ್ಲೆ | ಸದಸ್ಯ ಕಾರ್ಯದರ್ಶಿ |
| | | ಎಸ್‌ಪಿ, ಬೀದರ್ ಜಿಲ್ಲೆ | ಸದಸ್ಯರು |
| | | ಎಸ್‌ಪಿ, ಯಾದಗಿರಿ ಜಿಲ್ಲೆ | ಸದಸ್ಯರು |
| 16. | ಬಳ್ಳಾರಿ ವಲಯ, ಬಳ್ಳಾರಿ | ಐಜಿಪಿ, ಬಳ್ಳಾರಿ ವಲಯ, ಬಳ್ಳಾರಿ | ಅಧ್ಯಕ್ಷರು |
| | | ಎಸ್‌ಪಿ, ಬಳ್ಳಾರಿ ಜಿಲ್ಲೆ | ಸದಸ್ಯ ಕಾರ್ಯದರ್ಶಿ |
| | | ಎಸ್‌ಪಿ, ರಾಯಚೂರು ಜಿಲ್ಲೆ | ಸದಸ್ಯರು |
| | | ಎಸ್‌ಪಿ, ಕೊಪ್ಪಳ ಜಿಲ್ಲೆ | ಸದಸ್ಯರು |

9. ಮೇಲಿನ ಘಟಕಗಳ ವ್ಯಾಪ್ತಿಗೆ ಬಾರದ ಘಟಕಗಳ ಅಧಿಕಾರಿ / ಸಿಬ್ಬಂದಿಗಳ ಶಿಫಾರಸ್ಸುಗಳನ್ನು ಅವರ ಉನ್ನತಾಧಿಕಾರಿಗಳು ಪರಿಶೀಲಿಸಿ, ಪ್ರಧಾನ ಕಛೇರಿಗೆ ಕಳುಹಿಸತಕ್ಕದ್ದು. ಘಟಕಾಧಿಕಾರಿಗಳು ಶಿಫಾರಸ್ಸುಗಳನ್ನು ಆಯ್ಕೆ ಮಾಡುವಾಗ ಅತ್ಯಂತ ಗಣನೀಯ ಸೇವೆ ಸಲ್ಲಿಸಿರುವ ಅಧಿಕಾರಿ / ಸಿಬ್ಬಂದಿಯ ಹೆಸರನ್ನು ಮಾತ್ರ ಶಿಫಾರಸ್ಸು ಮಾಡಲು ತಿಳಿಸಲಾಗಿದೆ.

10. ಮಹಿಳಾ ಪೊಲೀಸ್ ಅಧಿಕಾರಿ / ಸಿಬ್ಬಂದಿಗಳಿಗು ಪ್ರಾದಾನ್ಯತೆ ನೀಡಿ, ಅರ್ಹ ಪ್ರಸ್ತಾವನೆಗಳನ್ನು ಕಳುಹಿಸುವ ಬಗ್ಗೆ ಹಾಗೂ ಎಸ್‌ಸಿ/ಎಸ್‌ಟಿ, ಅಲ್ಪಸಂಖ್ಯಾತರಿಗೆ ಸಂಬಂಧಿಸಿದ ಪ್ರಸ್ತಾವನೆಗಳನ್ನು ಕಳುಹಿಸುವ ಬಗ್ಗೆಯು ಗಮನ ಹರಿಸುವಂತೆ ಸೂಚಿಸಿದೆ.

11. ಶಿಫಾರಸ್ಸು ಮಾಡಲಾದ ಅಧಿಕಾರಿ / ಸಿಬ್ಬಂದಿಯವರ 3 ಪಾಸ್‌ಪೋರ್ಟ್ ಅಳತೆಯ ಕಲರ್ ಫೋಟೋಗಳನ್ನು ಕಳುಹಿಸುವುದು. *(ಕಾರ್ಯಕಾರಿ ಹುದ್ದೆಯಲ್ಲಿ ಅಥವಾ ಕಾರ್ಯಕಾರಿಯೇತರ ಹುದ್ದೆಯಲ್ಲಿರುವ ಎಲ್ಲಾ ಪೊಲೀಸ್ ಅಧಿಕಾರಿ / ಸಿಬ್ಬಂದಿಗಳ ಭಾವಚಿತ್ರಗಳು ಸಮವಸ್ತ್ರದಲ್ಲಿರಬೇಕು, ಪಿ-ಕ್ಯಾಪ್ / ಸ್ಲೋಚ್ ಹ್ಯಾಟನ್ನು ಧರಿಸಿರಬೇಕು ಮತ್ತು ನೇರವಾಗಿ ಕ್ಯಾಮರಾ ನೋಡುವಂತಿರಬೇಕು)*

12. ನಿಗದಿತ ಪ್ರಪತ್ರದಲ್ಲಿ ನಮೂದಿಸಿದ ನಾಮನಿರ್ದೇಶನದಾರರ ವೈಯಕ್ತಿಕ ವಿವರಗಳನ್ನು ಘಟಕಾಧಿಕಾರಿಗಳೇ ವೈಯಕ್ತಿಕ ಗಮನಹರಿಸಿ ಸ್ವತಃ ಪರಿಶೀಲಿಸತಕ್ಕದ್ದು. ನಾಮನಿರ್ದೇಶನಗಳಲ್ಲಿ ಯಾವುದೇ ತಪ್ಪು ಮಾಹಿತಿ ಮತ್ತು ಲೋಪದೋಷಗಳಿದ್ದಲ್ಲಿ ಸಂಬಂಧಪಟ್ಟ ಘಟಕಾಧಿಕಾರಿಗಳೇ ಜವಾಬ್ದಾರರಾಗಿರುತ್ತಾರೆ.

13. ಈ ಶಿಫಾರಸ್ಸುಗಳನ್ನು ದಿನಾಂಕ: 30-01-2024 ರೊಳಗಾಗಿ ತಪ್ಪದೇ ಈ ಕಚೇರಿಗೆ ಕಳುಹಿಸಿ ಕೊಡಲು ಕೋರಲಾಗಿದೆ. ನಿಗದಿ ಪಡಿಸಿದ ದಿನಾಂಕದ ನಂತರ ಬರುವ ಹಾಗೂ ಅಪೂರ್ಣ ಶಿಫಾರಸ್ಸುಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ತಿಳಿಸಲಾಗಿದೆ.

ಡಿಜಿ ಮತ್ತು ಐಜಿಪಿರವರಿಂದ
ಅನುಮೋದಿಸಲ್ಪಟ್ಟಿದೆ.

11/1/2024

(ಸೌಮೇಂದು ಮುಖರ್ಜಿ, ಐಪಿಎಸ್)
ಎಡಿಜಿಪಿ, ಆಡಳಿತ,
ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್
ಜನರಲ್ ಆಫ್ ಪೊಲೀಸ್‌ರವರ ಪರವಾಗಿ.

**ಗೆ,**

1) ಎಡಿಜಿಪಿ, ಪಿಸಿಡಬ್ಲ್ಯೂ / ತರಬೇತಿ / ಸಿ&ಟಿಎಸ್ / ಡಿಸಿಆರ್‌ಇ / ಕೆಎಸ್‌ಆರ್‌ಪಿ / ಕಾ&ಸು / ಸಿಎಲ್&ಎಂ / ಇಓ, ಸಿಐಡಿ / ಐಎಸ್‌ಡಿ, ಬೆಂಗಳೂರು
2) ನಿರ್ದೇಶಕರು, ರಾಜ್ಯ ಗುಪ್ತವಾರ್ತೆ, ಬೆಂಗಳೂರು
3) ಎಲ್ಲಾ ವಲಯಗಳ ಐಜಿಪಿ / ಡಿಐಜಿಪಿ ರವರುಗಳಿಗೆ
4) ಐಜಿಪಿ, ಎಸ್‌ಐಟಿ, ಕೆಎಲ್‌ಎ, ಬೆಂಗಳೂರು
5) ಅಡಿಷನಲ್ ಪೊಲೀಸ್ ಕಮೀಷನರ್, ಅಪರಾಧ / ಪೂರ್ವ / ಪಶ್ಚಿಮ / ಬೆಂಗಳೂರು ನಗರ
6) ಪೊಲೀಸ್ ಕಮೀಷನರ್, ಮೈಸೂರು ನಗರ / ಹುಬ್ಬಳ್ಳಿ-ಧಾರವಾಡ ನಗರ / ಮಂಗಳೂರು ನಗರ / ಬೆಳಗಾವಿ ನಗರ / ಕಲಬುರಗಿ ನಗರ.
7) ನಿರ್ದೇಶಕರು, ಕರ್ನಾಟಕ ಪೊಲೀಸ್ ಅಕಾಡೆಮಿ, ಮೈಸೂರು
8) ಡಿಐಜಿಪಿ, ರೈಲ್ವೇಸ್/ ಅರಣ್ಯ, ಬೆಂಗಳೂರು
9) ಜಂಟಿ ಪೊಲೀಸ್ ಕಮೀಷನರ್, ಸಂಚಾರ, ಬೆಂಗಳೂರು ನಗರ
10) ನಿರ್ದೇಶಕರು, ಎಫ್‌ಎಸ್‌ಎಲ್, ಬೆಂಗಳೂರು.
11) ಎಲ್ಲಾ ಜಿಲ್ಲಾ ಪೊಲೀಸ್ ಅಧೀಕ್ಷಕರುಗಳಿಗೆ ಕೆಜಿಎಫ್ ಮತ್ತು ರೈಲ್ವೇಸ್ ಸೇರಿದಂತೆ
12) ಎಲ್ಲಾ ವಿಭಾಗದ ಡಿ.ಸಿ.ಪಿ.ಗಳು ಬೆಂಗಳೂರು ನಗರ, ಸಿ.ಎ.ಆರ್. ಮತ್ತು ಸಂಚಾರ ವಿಭಾಗಗಳು ಸೇರಿದಂತೆ.
13) ಎಐಜಿಪಿ, ಕೇಂದ್ರಸ್ಥಾನ-1 / ಕೇಂದ್ರಸ್ಥಾನ/ ಆಡಳಿತ/ ಜನರಲ್/ ಅಪರಾಧ, ಪ್ರಧಾನ ಕಛೇರಿ, ಬೆಂಗಳೂರು.
14) ಪೊಲೀಸ್ ಅಧೀಕ್ಷಕರು, ವೈರ್‌ಲೆಸ್ / ಎಸ್.ಸಿ.ಆರ್.ಬಿ./ ಎಫ್.ಪಿ.ಬಿ. ಬೆಂಗಳೂರು.
15) ಎಲ್ಲಾ ಪೊಲೀಸ್ ತರಬೇತಿ ಶಾಲೆಗಳ ಪ್ರಾಂಶುಪಾಲರು
16) ಎಲ್ಲಾಕಮಾಂಡೆಂಟ್ ರವರಿಗೆ ಕೆ.ಎಸ್.ಆರ್.ಪಿ. / ಐಆರ್‌ಬಿಘಟಕ.
17) ಸಾರ್ವಜನಿಕ ಸಂಪರ್ಕಾಧಿಕಾರಿ, ಪೊಲೀಸ್ ಪ್ರಧಾನ ಕಚೇರಿ, ಬೆಂಗಳೂರು.

**ಪ್ರತಿಯನ್ನು ಅಭಿನಂದನೆಗಳೊಂದಿಗೆ ಕಳುಹಿಸಿದೆ :**

1) ಡೈರೆಕ್ಟರ್ ಜನರಲ್ ಆಫ್ ಪೊಲೀಸ್, ನೇಮಕಾತಿ, ಬೆಂಗಳೂರು
2) ಡೈರೆಕ್ಟರ್ ಜನರಲ್ ಆಫ್ ಪೊಲೀಸ್, ಐಎಸ್‌ಡಿ, ಬೆಂಗಳೂರು
3) ಡೈರೆಕ್ಟರ್ ಜನರಲ್ ಆಫ್ ಪೊಲೀಸ್, ಕೆಎಲ್‌ಎ, ಬೆಂಗಳೂರು.
4) ಡೈರೆಕ್ಟರ್ ಜನರಲ್ ಆಫ್ ಪೊಲೀಸ್, ಸಿಐಡಿ, ವಿಶೇಷ ಘಟಕಗಳು ಮತ್ತು ಆರ್ಥಿಕ ಅಪರಾಧಗಳು, ಬೆಂಗಳೂರು.
5) ಡೈರೆಕ್ಟರ್ ಜನರಲ್ ಆಫ್ ಪೊಲೀಸ್ ಹಾಗೂ ಚೇರ್‌ಮನ್ ಮತ್ತು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪೊಲೀಸ್ ಗೃಹ ನಿರ್ಮಾಣ ಮತ್ತು ಮೂಲಸೌಕರ್ಯ ಅಭಿವೃದ್ಧಿ ನಿಗಮ ಲಿ. ಬೆಂಗಳೂರು
6) ಪೊಲೀಸ್ ಕಮೀಷನರ್, ಬೆಂಗಳೂರು ನಗರ

ಪ್ರತಿ: i/c ಅಧಿಕಾರಿ, ಪೊಲೀಸ್ ಕಂಟ್ರೋಲ್ ರೂಂ, ಪ್ರಧಾನ ಕಛೇರಿ, ಬೆಂಗಳೂರು ರವರಿಗೆ ಶೀಘ್ರ ರವಾನೆಗಾಗಿ ಕಳುಹಿಸಿದೆ.

IGP CONTROL ROOM, BENGALURU
O/o. the DG & IGP, N.T.Road, B'luru-1
Out Messages Received for Transmission
NR No. 662 THI 1550
Date 24/01/24 Sign [signature]

## ನಮೂನೆ

### ಮಾನ್ಯ ಮುಖ್ಯಮಂತ್ರಿಯವರ ಪದಕ – 2023 ನೇ ಸಾಲಿನ ಶಿಫಾರಸ್ಸು

| | | |
|---|---|---|
| 1. | ಹೆಸರು (ಸೇವಾಪುಸ್ತಕದಲ್ಲಿರುವಂತೆ) | |
| 2. | ಹುದ್ದೆ | |
| 3. | ತಂದೆಯ ಹೆಸರು | |
| 4. | ಜನ್ಮ ದಿನಾಂಕ | |
| 5. | ಪ:ಜಾತಿ / ಪ:ಪಂಗಡ / ಅಲ್ಪ ಸಂಖ್ಯಾತ ಜನಾಂಗಕ್ಕೆ ಸೇರಿದವರಾಗಿದ್ದಾರೆಯೆ | |
| 6. | ಕೆಲಸಕ್ಕೆ ಸೇರಿದ ದಿನಾಂಕ | |
| 7. | ಖಾಯಂ ಪೂರ್ವ ಅವಧಿ ಘೋಷಣೆಯಾಗಿದೆಯೆ | |
| 8. | ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳ | |
| 9. | ಪ್ರಸ್ತುತ ಹುದ್ದೆಗೆ ಪದೋನ್ನತಿ ಹೊಂದಿದ ದಿನಾಂಕ | |
| 10. | ವಿದ್ಯಾರ್ಹತೆ: | |
| 11. | ಶೈಕ್ಷಣಿಕ | |
| 12. | ವೃತ್ತಿಪರ | |
| 13. | ಬಹುಮಾನಗಳು: | |
| | ಅ) ನಗದು ಬಹುಮಾನಗಳು | |
| | ಆ) ಶ್ಲಾಘನೀಯ ಪತ್ರಗಳು | |
| | ಇ) ಪ್ರಶಂಸನೀಯ ಪತ್ರಗಳು | |
| | ಈ) ಇತರೆ ಬಹುಮಾನಗಳು | |
| 14. | ಶಿಕ್ಷೆಗಳು: | |
| | ಅ) ಗುರುತರ | |
| | ಆ) ಲಘುತರ | |
| 15. | ಮೊಬೈಲ್ ನಂ (ಇಲಾಖೆಯಿಂದ ನೀಡಿರುವ ದೂರವಾಣಿ ಸಂಖ್ಯೆ ಮತ್ತು ವೈಯಕ್ತಿಕ ದೂರವಾಣಿ ಸಂಖ್ಯೆ) | |
| 16. | ಇ-ಮೇಲ್ ವಿಳಾಸ | |
| 17. | ಒಂದುವೇಳೆ ಈಗಾಗಲೇ ಮಾನ್ಯ ಮುಖ್ಯಮಂತ್ರಿಯವರ ಪದಕ ನೀಡಿದ್ದಾಗ್ಯೂ ಸಹ ಮತ್ತೊಮ್ಮೆ ಶಿಫಾರಸ್ಸನ್ನು ಕಳುಹಿಸುತ್ತಿದ್ದಲ್ಲಿ ಅದಕ್ಕೆ ಕಾರಣಗಳು | |

### ಪ್ರಮಾಣ ಪತ್ರ

ಈ ಮೂಲಕ ಪ್ರಮಾಣೀಕರಿಸುವುದೇನೆಂದರೆ, 2022ನೇ ಸಾಲಿನ ಮಾನ್ಯ ಮುಖ್ಯಮಂತ್ರಿಯವರ ಪದಕಕ್ಕೆ ಶಿಫಾರಸ್ಸು ಮಾಡಿರುವ ಶ್ರೀ ______________________________ ರವರ ದೃಢನಿಷ್ಠೆ ಮತ್ತು ಪ್ರಾಮಾಣಿಕತೆ ಬಗ್ಗೆ ಯಾವುದೇ ಅನುಮಾನವಿರುವುದಿಲ್ಲ ಮತ್ತು ಅವರು ನ್ಯಾಯಾಲಯದಲ್ಲಿ ಛೀಮಾರಿಗೊಳಗಾಗುವಂತಹ ಯಾವುದೇ ಶಿಸ್ತು ನಡುವಳಿಗಳಲ್ಲಿ ಸಿಲುಕಿರುವುದಿಲ್ಲ. ಮುಂದುವರಿದು ಪ್ರಮಾಣೀಕರಿಸುವುದೇನೆಂದರೆ, ಈ ಪ್ರಶಸ್ತಿ ಪ್ರದಾನಕ್ಕೆ ಶಿಫಾರಸ್ಸು ಮಾಡಿರುವ ಈ ಅಧಿಕಾರಿಯ ನಡತೆಗೆ ಸಂಬಂಧಿಸಿದಂತೆ ಇವರ ವಿರುದ್ಧ ಯಾವುದೇ ಚಾಲ್ತಿ ಶಿಕ್ಷೆ / ಇಲಾಖಾ ವಿಚಾರಣೆ/ನ್ಯಾಯಾಂಗ ನಡುವಳಿ/ ಕ್ರಿಮಿನಲ್ ಮೊಕದ್ದಮೆಗಳು ಬಾಕಿ ಇರುವುದಿಲ್ಲ.

ಶಿಫಾರಸ್ಸು ಮಾಡುವ ಅಧಿಕಾರಿಯ ಸಹಿ

ⓢ

# ಗುಣಕಥನ

ಶ್ರೀ / ಶ್ರೀಮತಿ

ದಿನಾಂಕ:

ಶಿಫಾರಸ್ಸು ಮಾಡುವ ಅಧಿಕಾರಿಯ ಸಹಿ

ANNEXURE – B

# AGREEMENT

I,------------------------------------------------------------------------------------ to whom the Karnataka Chief Minister's Medal- 2023 is awarded, declare that I have read over and understood the conditions attached to the Medal. I hereby undertake to return the Medal, if my name at any time be removed from the register of awardees, when called upon to do so, in accordance with the provisions of the Karnataka Chief Minister's Medal Rules 1982 and subsequent amendments.

Date: (Signature of the awardee)

Witnessed by:

# PROFORMA

## Recommendation of Chief Minister's Medal for the year - 2023

| | | |
|---|---|---|
| 1 | Name | |
| 2 | Designation | |
| 3 | Father Name | |
| 4 | Date of Birth | |
| 5 | SC/ ST/OBC/Minorities | |
| 6 | Date of Entry into service | |
| 7 | Whether Probationary Period Declared or not | |
| 8 | Present Place of Working | |
| 9 | Date of promotion to present post | |
| 10 | Educational Qualification | |
| 11 | (a) Academic | |
| 12 | (b) Professional | |
| 13 | Rewards | |
| | (a) Cash | |
| | (b) Commendation | |
| | (c) Appreciation letters | |
| | (d) Other rewards | |
| 14 | Punishments | |
| | (a) Major | |
| | (b) Minor | |
| 15 | Mobile Number<br>(CUG Number and Personal Number) | |
| 16 | E-Mail Address | |
| 17 | If already obtained C.M Medal ; details | |

**CERTIFICATE**

Certified that the integrity of Sri./Smt. recommended for the award of Karnataka Chief Minister's Medal for the year 2023, is above suspicion and that he was not concerned in any proceedings that were censured in a Court of Law. It is further certified that in respect of the Conduct of the nominee underlying the present recommendation no judicial proceedings are pending and there are no departmental enquiry/proceedings pending against him.

Signature of the Recommending Authority...............

Name :

Designation:

Date :

# Citation

Signature of the Recommending Authority................

Name :

Designation: